# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 50/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 23-06-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಅಮನ ಮಿತ್ತಲ | **ಪ್ರಾ.ಸಾ ಃ 06** |
| **ತಂದೆ ಃ ಗಂಡ ಹೆಸರು** | ಃ | ಅಲೋಕ | **ಚಾ.ಸಾ ಃ 07** |
| **ವಯಸ್ಸು** | ಃ | 31 ವರ್ಷ | |
| **ಉದ್ಯೋಗ** | ಃ | ಮ್ಯಾನೇಜರ, ಎಸ್ ಬಿ ಐ, ಎಸ್ ಎಂ ಇ ಸೆಕ್ಟರ ನಂ 18, ನೋಯಿಡಾ | |
| **ವಾಸಸ್ಥಳ** | ಃ | ನೋಯಿಡಾ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನಾನು ಮೇ 2019 ರಿಂದ ಅಗಸ್ಟ 2020 ರವರೆಗೆ ಕಲಘಟಯ ಸ್ಟೇಟ ಬ್ಯಾಂಕ ಆಫ್ ಮೈಸೂರ (ನಂತರ ಸ್ಟೇಟ್ ಬ್ಯಾಂಕ ಆಫ್ ಇಂಡಿಯ) ನಲ್ಲಿ ಬ್ರ್ಯಾಂಚ್ ಹೆಡ್ ಎಂದು ಸೇವೆ ಸಲ್ಲಿಸಿದ್ದೇನೆ.

ನನಗೆ ಚಾಸಾ-1 ರಿಂದ 3 ಮತ್ತು 6 ರವರ ಪರಿಚಯ ಇದೆ. ನನಗೆ 1 ಮತ್ತು 3 ನೇ ಆರೋಪಿತರ ಪರಿಚಯ ಇರುವುದಿಲ್ಲ. 2 ನೇ ಆರೋಪಿ ವಯಕ್ತಿಕವಾಗಿ ಗೊತ್ತಿಲ್ಲ. ಆದರೆ ಅವರ ಪರಿಚಯ ಇದೆ. 4 ನೇ ಆರೋಪಿ ಹಿಂದಿನ ಬ್ಯಾಂಕ ಮ್ಯಾನೇಜರ ಆಗಿದ್ದರು.

ನಮ್ಮ ಬ್ಯಾಂಕ ಶಾಖೆಯಿಂದ ಕಾರ ಲೋನ ಪಡೆದುಕೊಂಡು ಹಣ ಮರುಪಾವತಿ ಮಾಡಿರಲಿಲ್ಲ. ಆ ಸಮಯದಲ್ಲಿ 4 ನೇ ಆರೋಪಿ ಬ್ಯಾಂಕ ಮ್ಯಾನೇಜರ ಆಗಿದ್ದರು. 4 ನೇ ಆರೋಪಿ ವರ್ಗಾವಣೆ ಆದ ನಂತರ ಚಾಸಾ-1 ರವರು ಬ್ಯಾಂಕ ಮ್ಯಾನೇಜರ ಆಗಿ ಶಾಖೆಗೆ ಬಂದಿರುತ್ತಾರೆ, ಚಾಸಾ-1 ರವರು ದಾಖಲೆಗಳನ್ನು ಪರಿಶೀಲಿಸಿದಾಗ ದಾಖಲೆಗಳು ಸರಿಯಾಗಿ ಇಲ್ಲ ಎಂದು ಕಂಡುಬಂದಿರುತ್ತದೆ. ಈ ಬಗ್ಗೆ ಮೇಲಾಧಿಕಾರಿಗಳಿಗೆ ತಿಳಿಸಿದಾಗ ಕಾನೂನು ಕ್ರಮ ಜರುಗಿಸುವಂತೆ ಚಾಸಾ-1 ರವರಿಗೆ ಮಾಹಿತಿ ನೀಡಿರುತ್ತಾರೆ. ಆರೋಪಿತರು ಬ್ಯಾಂಕಿನಿಂದ ಎಷ್ಟು ಮೊತ್ತಕ್ಕೆ ಸಾಲ ಪಡೆದುಕೊಂಡಿದ್ದ ಗೊತ್ತಿಲ್ಲ, ಒಂದು ಮೋಟರ ವಾಹನ ಕಂಪನಿಯ ಖಾತೆಗೆ ಹಣ ವರ್ಗಾವಣೆ ಆಗಿದ್ದು, ಹೇಗೆ ಪಡೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ.

4 ನೇ ಆರೋಪಿ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿದ ಬಗ್ಗೆ ಪೋಲೀಸರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಈ ಬಗ್ಗೆ ಮಾಹಿತಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು. ಕಾರ ಲೋನ ಎನ್ ಪಿ ಎ ಆದ ಬಗ್ಗೆ ವರಿದಿ ಸಲ್ಲಿಸಿದ್ದು ಅದನ್ನು ನಿಪಿ-21, ಸಾಕ್ಷಿ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯೊಂದಿಗೆ ವಿವರಗಳ 2 ಪುಟದ ಯಾದಿ ಲಗತ್ತಿಸಲಾಗಿದೆ. ಕಾರ ಲೋನ ದುರುಪಯೋಗ ಪಡಿಸಿಕೊಂಡ ಬಗ್ಗೆ ನೀಡಿದ ಪತ್ರವನ್ನು ನಿಪಿ-22, ಅದರ ಜೊತೆಗೆ ಸಾಲಗಾರರ ವಿವರ ಇರುತ್ತದೆ. 1 ನೇ ಆರೋಪಿಯ ಖಾತೆಗೆ ಸೇರಿದ ಬ್ಯಾಂಕ ಸ್ಟೇಟಮೆಂಟನ್ನು ನಿಪಿ-23 ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿಲ್ಲ.

*(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

2015 ರಲ್ಲಿ 1 ರಿಂದ 3 ನೇ ಆರೋಪಿತರು ನಮ್ಮ ಬ್ಯಾಂಕ ಶಾಖೆಗೆ ಮೇಲಿಂದ ಮೇಲೆ ಕಾರ ಲೋನ ಪಡೆದುಕೊಳ್ಳುವ ಸಲುವಾಗಿ ಬಂದು 4 ನೇ ಆರೋಪಿಯ ಕಚೇರಿಯಲ್ಲಿ ಬಹಳ ಹೊತ್ತು ಕುಳಿತುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಆರೋಪಿಯು 1 ನೇ ಆರೋಪಿ ಹಾಗೂ ಇತರರನ್ನು ಕಾರ ಲೋನ ಕೊಡಿಸುವ ಸಲುವಾಗಿ ಅವರಿಗೆ ಜಾಮೀನುದಾರನಾಗಿ ಕಾರ ಲೋನ ಹಣ ಕೊಡಿಸುತ್ತಿದ್ದಾನೆಂದು ನಮ್ಮ ಬ್ಯಾಂಕ ಸಿಬ್ಬಂದಿಯವರು ಮಾತನಾಡುತ್ತಿದ್ದುದರಿಂದ ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕಾರ ಖರೀದಿಸುವ ಉದ್ದೇಶದಿಂದ ರೇವಣಕರ ಮೋಟರ್ಸ ಪ್ರಾ. ಲಿ ಹುಬ್ಬಳ್ಳಿ ಇವರ ಹೆಸರಿನ ಖೊಟ್ಟಿ ಕೊಟೇಷನ ದಾಖಲೆಗಳನ್ನು ಸಲ್ಲಿಸಿದ್ದು ಅದಕ್ಕೆ 2 ನೇ ಆರೋಪಿ ಜಾಮೀನುದಾರನಾಗಿರುತ್ತಾನೆ ಎಂದರೆ ಸರಿಯಲ್ಲ. 4 ನೇ ಆರೋಪಿಯು 1 ರಿಂದ 3 ನೇ ಆರೋಪಿಯೊಂದಿಗೆ ಶಾಮಿಲಾಗಿ ದಾಖಲೆಗಳನ್ನು ಪರಿಶೀಲಿಸದೆ ಒಳಸಂಚು ರೂಪಿಸಿ ದಾಖಲೆಗಳು ಖೊಟ್ಟಿಯಾಗಿರುತ್ತವೆ ಎನ್ನುವದು ಗೊತ್ತಿದ್ದರೂ ಕೂಡಾ ಬ್ಯಾಂಕ ನಿಯಮಾವಳಿ ಉಲ್ಲಂಘಿಸಿ 1 ನೇ ಆರೋಪಿಯಿಂದ ಎಸ್ ಬಿ ಐ ಲೈಫ ಇನ್ಸೂರೆನ್ಸ ಪಾಲಸಿ ಮಾಡಿಸಿಕೊಂಡು ಬ್ಯಾಂಕನಿಂದ ಇನಸೆಂಟಿವ್ ಹಣ ಪಡೆದುಕೊಂಡು ವಂಚನೆ ಮಾಡುವ ಉದ್ದೇಶದಿಂದ ದಿನಾಂಕ 05.09.2015 ರಂದು ರೂ 6,00,000/- ಗಳನ್ನು 1 ನೇ ಆರೋಪಿಯ ಎಸ್ ಬಿ ಖಾತೆ ನಂ 64178318718 ನೇದ್ದಕ್ಕೆ ಜಮಾ ಮಾಡಿ ನಂತರ ಸದರ ಹಣವನ್ನು ಧಾರವಾಡ ಕಾರ್ಪೋರೇಷನ ಬ್ಯಾಂಕನಲ್ಲಿರುವ ರೇವಣಕರ ಮೋಟರ್ಸ ಪ್ರೊಪರೈಟರ 3 ನೇ ಆರೋಪಿಯ ಚಾಲ್ತಿ ಖಾತೆ ನಂ 306201601150017 ನೇದ್ದಕ್ಕೆ ಆರ್ ಟಿ ಜಿ ಎಸ್ ಮುಖಾಂತರ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕಾರ ಸಾಲದ ಹಣ ಮಂಜೂರು ಮಾಡಿಸಿಕೊಂಡು ಕಾರ ಖರೀದಿಸದೆ ಬ್ಯಾಂಕಿಗೆ ಹಣವನ್ನು ಮರಳಿಸದೆ ಮರುಪಾವತಿ ಮಾಡದೆ ಆರೋಪಿತರು ಮಿಲಾಪಿಯಾಗಿ ಸ್ವಂತಕ್ಕೆ ದುರುಪಯೋಗ ಪಡಿಸಿಕೊಂಡು ಬ್ಯಾಂಕಿಗೆ ನಷ್ಟ ಪಡಿಸಿ ಮೋಸ ಹಾಗೂ ನಂಬಿಕೆದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರ ಮುಂದೆ ನಿಪಿ-24 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ನಮ್ಮ ಹಿಂದಿನ ಬ್ಯಾಂಕಿನ ವ್ಯವಸ್ಥಾಪಕರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ. 2015 ರಲ್ಲಿ ಬ್ಯಾಂಚರವರು ಎಷ್ಟು ಮೊತ್ತದ ಸಾಲವನ್ನು ಮಂಜೂರು ಮಾಡುತ್ತಿದ್ದರು ಎಂದು ಹೇಳಲು ಬರುವುದಿಲ್ಲ. ಸಾಲದ ಹಣ ಮರು ಪಾವತಿ ಮಾಡದೆ ಇದ್ದರೆ ಬ್ಯಾಂಕಿನವರು ಸಿವಿಲ್ ದಾವೆ ಸಲ್ಲಿಸಬಹುದು ಎಂದರೆ ನಿಜ. 1 ರಿಂದ 3 ನೇ ಆರೋಪಿತರ ವಿರುದ್ಧ ಬ್ಯಾಂನಕಿನವರು ಸಾಲ ವಸೂಲಿಗಾಗಿ ಕ್ರಮ ಕೈಗೊಂಡ ವಿಷಯ ನನಗೆ ಗೊತ್ತಿಲ್ಲ. ನನಗೆ ಸಾಲದ ವ್ಯವಹಾರದ ಬಗ್ಗೆ ವಯಕ್ತಿಕ ಮಾಹಿತಿ ಇರುವುದಿಲ್ಲ. ನಾನು 4 ನೇ ಆರೋಪಿಯ ಸೇವಾ ಪ್ರಮಾಣ

ಪತ್ರವನ್ನು ಪೋಲೀಸರಿಗೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿದ ನಿಪಿ-20 ರಿಂದ 23 ದಾಖಲೆಗಳಲ್ಲಿ ಮೂಲ ದಾಖಲೆಯ ಪ್ರತಿಗಳು ಎಂದು ದೃಡಿಕರಿಸಿಲ್ಲ. ಮೂಲ ದಾಖಲೆಯ ಪ್ರತಿಗಳು ಎಂದು ನಮೂದಿಸಿಲ್ಲ. ಈ ಪ್ರಕರಣದಲ್ಲಿ ಕಾರ ಲೋನಕ್ಕೆ ಸಂಬಂಧಿಸಿದ ಹಲವು ಎನ್ ಪಿ ಎ ಪ್ರಕರಣಗಳನ್ನು ಹಣ ಸಂದಾಯ ಮಾಡುವ ಮೂಲಕ ಮುಕ್ತಾಯಗೊಳಿಸುತ್ತಾರೆ ಎಂದರೆ ನಿಜ. ಸಾಲದ ಹಣವನ್ನು ಮುಕ್ತಾಯ ಮಾಡಿದವರ ಬಗ್ಗೆ ಪೋಲೀಸರ ಮುಂದೆ ಯಾವುದೆ ಮಾಹಿತಿ ನೀಡಿಲ್ಲ. ನಾವು ಖಾತೆ ಬಂದ ಮಾಡಿದ ವಿವರವನ್ನು ಪೋಲೀಸರು ಪಡೆದುಕೊಂಡಿರುವುದು ನನಗೆ ನೆನಪಿಲ್ಲ.

(ಸಾಕ್ಷಿ ವಿಚಾರಣೆಯನ್ನು ವ್ಯಾಟ್ಸಪ್ ಮೊಬೈಲ ವಿಡಿಯೋ ಕಾಲ ಮುಖಾಂತರ ಪಡೆದುಕೊಂಡಿದ್ದು ಸಾಕ್ಷಿ ಸಹಿ ಇರುವುದಿಲ್ಲ)

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**